



ಭಕ್ತ ಕನಕದಾಸ
ಕಥೆ: ಸ್ಯಾಮ್
ಚಿತ್ರ: ಶಂಕರ್
ಕನಕದಾಸನು ದಾಸ ಸಂಪ್ರದಾಯಕ್ಕೆ ಸೇರಿದ ದೊಡ್ಡ ಭಕ್ತ. ಅವನು ದೊಡ್ಡ ಕವಿಯೂ ಆಗಿದ್ದ. ಅವನ ಭಕ್ತಿಗೀತೆಗಳನ್ನು ಇಂದಿಗೂ ಕರ್ನಾಟಕದ ಎಲ್ಲೆಡೆ ಜನ ಹಾಡುತ್ತಿರುತ್ತಾರೆ. ಅವನು ಅನಾಥ ಬಾಲಕನಾಗಿದ್ದುದರಿಂದ ಚಿಕ್ಕ ವಯಸ್ಸಿನಲ್ಲಿ ದೇವರನಾಮಗಳನ್ನು ಹಾಡುತ್ತಾ ಎಲ್ಲೆಡೆ ಅಲೆದಾಡುತ್ತಿದ್ದನು. ಅವನು ಬೇಟೆಗಾರರ ಕುಟುಂಬಕ್ಕೆ ಸೇರಿದನಾಗಿದ್ದನು. ಹಾವೇರಿ ಜಿಲ್ಲೆಯ ಬಾಡ ಎಂಬ ಗ್ರಾಮದಲ್ಲಿ ಅವನು ವಾಸಿಸುತ್ತಿದ್ದನು.
ಒಂದು ದಿನ ಅವನು ನಡೆದು ಹೋಗುತ್ತಿದ್ದಾಗ, ಕಲ್ಲೊಂದನ್ನು ಎಡವಿದ. ಆ ಕಲ್ಲನ್ನು ಪಕ್ಕಕ್ಕೆ ಸರಿಸಿದಾಗ, ಅದರ ಕೆಳಗೆ ಒಂದು ನಿಧಿ ಇದ್ದಿತು. ಅದನ್ನು ನೋಡಿ ಅವನಿಗೆ ತುಂಬಾ ಆಶ್ಚರ್ಯವಾಯಿತು.
1
ಈ ತುಚ್ಛ ನಿಧಿಯಿಂದೇನು ಪ್ರಯೋಜನ? ಇದು ಭಗವಂತನ ನಾಮಕ್ಕಿಂತ ಮೌಲ್ಯವುಳ್ಳದ್ದೇ?
ಪ್ರಪಂಚದಲ್ಲಿ ಜನ ಧನಸಂಪಾದಿಸಲು ಎಷ್ಟೊಂದು ಕಷ್ಟಪಡುತ್ತಾರೆ? ಆದರೆ ಅವನಿಗೆ ಈ ಬಂಗಾರವೆಲ್ಲಾ ಮಣ್ಣಿಗಿಂತ ಕಡೆಯಾಗಿತ್ತು. ಆ ಬಂಗಾರದ ನಾಣ್ಯಗಳನ್ನೆಲ್ಲಾ ಅವನು ಕೇಳಿದವರಿಗೆ ದಾನ ಮಾಡಿಬಿಟ್ಟ.
2
ಪುರಂದರದಾಸರ ಸಮಕಾಲೀನರಾಗಿದ್ದ ವ್ಯಾಸರಾಯರ ಬಳಿ ಅವನು ಶಿಷ್ಯನಾದ. ಒಮ್ಮೆ ಆ ಗುರುಗಳು ತಮ್ಮ ಶಿಷ್ಯರನ್ನೆಲ್ಲಾ ಬಳಿಗೆ ಕರೆದು ಹೇಳಿದರು –
3
ಓ ಶಿಷ್ಯರೇ! ನೀವೆಲ್ಲಾ ಒಬ್ಬೊಬ್ಬರು ಒಂದೊಂದು ಹಣ್ಣನ್ನು ತೆಗೆದುಕೊಂಡು ಹೋಗಿ ಯಾರ ಕಣ್ಣಿಗೂ ಬೀಳದಂತೆ ಗುಟ್ಟಾಗಿ ಅದನ್ನು ತಿಂದು ಬನ್ನಿ.


ಕನಕದಾಸನೊಬ್ಬನನ್ನು ಬಿಟ್ಟು, ಉಳಿದ ಎಲ್ಲಾ ಶಿಷ್ಯರೂ ಮರದ ಕೆಳಗೋ, ಅಥವಾ ಗೋಡೆಯ ಮರೆಯಲ್ಲೋ, ಯಾರ ಕಣ್ಣಿಗೂ ಬೀಳದಂತೆ ಅವಸರ ಅವಸರವಾಗಿ ಹಣ್ಣನ್ನು ತಿಂದು ಗುರುವಿನ ಬಳಿಗೆ ಹಿಂದಿರುಗಿ ಬಂದರು.
4
ಕನಕದಾಸ ಮಾತ್ರ ಕೈಯಲ್ಲಿ ಹಾಗೇ ಹಣ್ಣನ್ನು ಹಿಡಿದುಕೊಂಡು ತಿನ್ನದೆ ನಿಂತಿದ್ದ.
ಯಾಕೆ ನೀನು ಹಣ್ಣನ್ನು ತಿನ್ನಲಿಲ್ಲ?
5
ನಾನೇನು ಮಾಡಲಿ? ನನಗೆ ರಹಸ್ಯ ಸ್ಥಳ ಯಾವುದೂ ಸಿಗಲಿಲ್ಲ.
ಯಾಕೆ? ಎಲ್ಲರೂ ಹೋಗಿ ಯಾರಿಗೂ ಕಾಣದ ಜಾಗಗಳನ್ನು ಹುಡುಕಿ ಹಣ್ಣನ್ನು ತಿಂದರಲ್ಲ. ನೀನೇಕೆ ಪ್ರಯತ್ನಿಸಲಿಲ್ಲ?
6
ಗುರುಗಳೇ! ನಾನು ಹಲವಾರು ಕಡೆ ಹೋದೆ. ಆದರೆ ಎಂತಹ ಮರೆಯಾದ ಪ್ರದೇಶವಾದರೂ ಅಲ್ಲಿ ಭಗವಂತನಿರುವಂತೆ ಭಾಸವಾಯಿತು. ಆದುದರಿಂದ ನನ್ನಿಂದ ಹಣ್ಣನ್ನು ತಿನ್ನಲಾಗಲಿಲ್ಲ. ಜನಗಳಿಲ್ಲದ ಪ್ರದೇಶವಿರಬಹುದು. ಆದರೆ ದೇವರಿಲ್ಲದ ಪ್ರದೇಶವೇ ಇಲ್ಲ.
ಆಹಾ! ನೀನು ನಿಜಕ್ಕೂ ದೊಡ್ಡ ಭಕ್ತ. ನಿಜವಾದ ಭಕ್ತ ಯಾವಾಗಲೂ ಎಲ್ಲೆಲ್ಲೂ ದೇವರನ್ನು ಕಾಣುತ್ತಾನೆ. ಕನಕ! ದೀರ್ಘಾಯುವಾಗಿ ಬಾಳು.
7


ಒಮ್ಮೆ ಉಡುಪಿಯ ಶ್ರೀಕೃಷ್ಣದೇವಾಲಯದಲ್ಲಿ ಒಂದು ದೊಡ್ಡ ಉತ್ಸವವನ್ನು ಏರ್ಪಡಿಸಲಾಯಿತು. ದೇವಸ್ಥಾನವನ್ನೆಲ್ಲಾ ತುಂಬಾ ವಿಶೇಷವಾಗಿ ಅಲಂಕರಿಸಿದ್ದರು. ನೂರಾರು ವಿದ್ವಾಂಸರು ಅಲ್ಲಿ ಸೇರಿದ್ದರು. ಕನಕದಾಸನು ಕೈಯಲ್ಲಿ ಒಂದು ತಂಬೂರಿ ಹಿಡಿದುಕೊಂಡು ಭಕ್ತಿಪರವಶನಾಗಿ ನಾಮವನ್ನು ಹಾಡುತ್ತಾ ಅಲ್ಲಿಗೆ ಬಂದನು.
8
ಎಲವೋ ಮೂರ್ಖ! ದೇವಸ್ಥಾನದ ಒಳಗಡೆ ಪ್ರವೇಶಿಸಲು ನಿನಗೆ ಎಷ್ಟು ಧೈರ್ಯ! ಇಲ್ಲಿ ಮೇಲು ಜಾತಿಯವರಿಗೆ ಮಾತ್ರ ಪ್ರವೇಶ. ಈ ಸ್ಥಳವನ್ನು ಅಪವಿತ್ರಗೊಳಿಸಬೇಡ. ತೊಲಗಾಚೆ!
ಗೋವಿಂದ!ಹರಿ! ಕೃಷ್ಣ! ಗೋವಿಂದ!
ಅವನು ಅವರ ಮಾತಿಗೆ ಗಮನ ಕೊಡದೆ ಹಾಗೇ ನಿಂತಿದ್ದನ್ನು ನೋಡಿ ಎಲ್ಲರಿಗೂ ಕೋಪ ಉಕ್ಕಿ ಬಂತು. ಒಬ್ಬ ಅವನತ್ತ ಧಾವಿಸಿದ.
ಅವನನ್ನು ಹೊರಗೆ ತಳ್ಳಿ!
9
ಒಳ್ಳೇ ಹಠಮಾರಿ. ಯಾವುದಾದರೂ ಮನೆಯ ಮುಂದೆ ಹಾಡಿದರೆ ಸ್ವಲ್ಪ ಭಿಕ್ಷೆ ಸಿಗಬಹುದು. ಆದರೆ ಇಲ್ಲಿ ಬಂದು ಈ ಸ್ಥಳವನ್ನೇಕೆ ಅಪವಿತ್ರಗೊಳಿಸುತ್ತಿದ್ದಾನೆ?
ಪ್ರೈಮರೆತು ಹಾಡುತ್ತಿದ್ದ ಕನಕದಾಸ ಇವರ ಗಲಾಟೆಯಿಂದ ನಿಧಾನವಾಗಿ ಕಣ್ಣು ತೆರೆದು, ಅಲ್ಲಿಯ ಪರಿಸ್ಥಿತಿಯನ್ನು ಅರಿತುಕೊಂಡು ಒಂದು ಮಾತನ್ನೂ ಆಡದೆ, ದೇವಸ್ಥಾನಕ್ಕೆ ಪ್ರದಕ್ಷಿಣೆ ಮಾಡಿ, ದೇವಸ್ಥಾನದ ಹಿಂಭಾಗಕ್ಕೆ ಬಂದು ಗೋಡೆಗೊರಗಿ ಹಾಗೇ ನಿಂತ.
10
ಕೃಷ್ಣ! ಮಾಧವ! ನಿನ್ನ ದೇವಸ್ಥಾನದಲ್ಲಿ ನಿನ್ನ ದರ್ಶನ ಪಡೆಯುವ ಭಾಗ್ಯ ನನಗಿಲ್ಲವೆ?
ಏನಾಶ್ಚರ್ಯ! ತಕ್ಷಣ, ಭಯಂಕರ ಶಬ್ದ ಕೇಳಿಬಂದಿತು. ಕನಕನು ಒರಗಿ ನಿಂತಿದ್ದ ದೇವಸ್ಥಾನದ ಗೋಡೆ ಬಿರುಕುಬಿಟ್ಟು ಒಂದು ಕಿಂಡಿಯಾಯಿತು. ಭಗವಾನ್‌ಕೃಷ್ಣನ ಮೂರ್ತಿ ಕನಕದಾಸನ ಕಡೆ ಮುಖ ಮಾಡಿ ಅವನಿಗೆ ಕಾಣುವಂತೆ ತಿರುಗಿಕೊಂಡಿತು. ಕನಕನು ಶ್ರೀಕೃಷ್ಣ ದರ್ಶನದಿಂದ ಧನ್ಯನಾದ.
11
ಇಂದಿಗೂ ಆ ಕಿಂಡಿ ಹಾಗೇ ಇದೆ. ಅದನ್ನು 'ಕನಕನ ಕಿಂಡಿ' ಎಂದು ಕರೆಯುತ್ತಾರೆ. ಅವನು ಭಕ್ತಿಯಿಂದ ರಚಿಸಿರುವ 'ಹರಿಭಕ್ತಿಸಾರ' ಇಂದಿಗೂ ಜನಪ್ರಿಯವಾಗಿದೆ.
12